- ರೇಷ್ಮೆ ಎಳೆಯನ್ನು ಕೊನೆಯ ಪೆಲೆಡ್ ಪದರದವರೆಗೆ ಸಂಪೂರ್ಣವಾಗಿ ತೆಗೆಯ ಬಹುದಾದ್ದರಿಂದ ಹೆಚ್ಚಿನ ಕಚ್ಚಾ ರೇಷ್ಮೆಯ ಪ್ರಮಾಣ (14.5–15%)
- ಉದ್ದನೆಯ ಎಳೆ(900 ಮೀ ಕ್ಕಿಂತ ಹೆಚ್ಚು) ಹಾಗೂ ಹೆಚ್ಚಿನ ಶುಚಿತ್ವ (88 ಅಂಕಗಳಿಗೂ ಹೆಚ್ಚು)
- ಉತ್ತಮ ಟೆನಾಸಿಟಿ (>3.7 g/d), ಎಲಾಂಗೇಶನ್ (>22%) ಮತ್ತು ಕೋಹಿಜನ್ (>60 ಸ್ಟ್ರೋಕ್ಸ್) ಹೊಂದಿರುವುದರಿಂದ ಗೂಡುಗಳನ್ನು ಮಲ್ಟಿಎಂಡ್ ಮತ್ತು ಸ್ವಯಂಚಾಲಿತ ನೂಲು ಬಿಚ್ಚಾಣಿಕೆ ಯಂತ್ರಗಳಿಂದ ವಿದ್ಯುತ್ ಚಾಲಿತ ಮಗ್ಗಗಳಿಗೆ ಸೂಕ್ತವಾದ ಉತ್ತಮ ಗುಣಮಟ್ಟದ (2A-3A) ಗ್ರೇಡ್ ಕಚ್ಚಾರೇಷ್ಮೆ ಉತ್ಪಾದನೆ ಸಾಧ್ಯ
- ಪ್ರಚಲಿತ PM x CSR2 ಗಿಂತ ಮಾರುಕಟ್ಟೆಯಲ್ಲಿ 1 ಕಿ.ಗ್ರಾಂ. ಗೂಡಿಗೆ 30–40 ರೂ.ಗಳು ಹಾಗೂ ರೇಷ್ಮೆಗೆ 500–600 ರೂಗಳಷ್ಟು ಅಧಿಕ ಧಾರಣೆ ಹೊಂದಿದ್ದು, ರೇಷ್ಮೆ ಕೃಷಿಕರಿಗೆ ಹಾಗೂ ನೂಲು ಬಿಚ್ಚಾಣಿಕೆದಾರರಿಗೆ ಒಂದು ವರದಾನವಾಗಿದೆ.

### ಸ್ಥಳಾವಕಾಶ ಮತ್ತು ಸೊಪ್ಪಿನ ಪ್ರಮಾಣ (100 ಮೊಟ್ಟೆಗಳಿಗೆ)

| ಹುಳುವಿನ ಹಂತ | ಹುಳುವಿನ ಹಾಸಿಗೆ ವಿಸ್ತೀರ್ಣ (ಚ.ಅಡಿ) | | ಹಿಪ್ಪುನೇರಳೆ ಸೊಪ್ಪಿನ ಪ್ರಮಾಣ (ಕಿ.ಗ್ರಾಂ) |
|---|---|---|---|
| | ಆರಂಭದಲ್ಲಿ | ಕೊನೆಯಲ್ಲಿ | |
| 1ನೇ ಹಂತ | 12 (2 ತಟ್ಟೆಗಳು) | 30 (5 ತಟ್ಟೆಗಳು) | 6 * |
| 2ನೇ ಹಂತ | 30 (5 ತಟ್ಟೆಗಳು) | 60 (10 ತಟ್ಟೆಗಳು) | 20* |
| 3ನೇ ಹಂತ | 100 | 200 | 150** |
| 4ನೇ ಹಂತ | 200 | 400 | 500** |
| 5ನೇ ಹಂತ | 400 | 800 | 2500** |

ಸೂಚನೆ: *ಸೊಪ್ಪು, **ರೆಂಬೆ

### ಪ್ರಚಲಿತ ಮಿಶ್ರತಳಿ PM x CSR2 ರ ಹೋಲಿಕೆಯ ಮೇಲೆ ನೂತನ ಮಿಶ್ರತಳಿಯ ಪ್ರಯೋಜನಗಳು

- ಉನ್ನತ ಆರ್ಥಿಕ ಚಹರೆಗಳಾದ ಗೂಡಿನ ಕವಚದ ತೂಕ, ಶೇಕಡಾವಾರು ಕವಚ, ರೆಂಡಿಟ್ಟಾ, ನೂಲಿನ ಶುಚಿತ್ವ ಗಾತ್ರ ವಿಚಲನ, ಟೆನಾಸಿಟಿ, ಕೊಹಿಜನ್ ಮತ್ತು ಇಲಾಗೇಂಶನ್
- ಮಲ್ಟಿಎಂಡ್ ಹಾಗೂ ಸ್ವಯಂಚಾಲಿತ ಯಂತ್ರಗಳಿಂದ ನೂಲು ಬಿಚ್ಚಾಣಿಕೆ
- ಕಚ್ಚಾ ರೇಷ್ಮೆಯು (2A-3A) ದರ್ಜೆಯವಾಗಿದ್ದು, ವಿದ್ಯುಚ್ಛಾಲಿತ ಹಾಗೂ ಸುಧಾರಿತ ಯಾಂತ್ರೀಕೃತ ಮಗ್ಗಗಳಲ್ಲಿ ಹಾಸು ಮತ್ತು ಹೊಕ್ಕಾಗಿ ಬಳಸಬಹುದು. ಎಳೆಯಾಗಿ (ವೆಫ್ಟ್) ಹಾಗೂ ಹಾಸಾಗಿ (ವಾರ್ಪ್) ಬಳಕೆ.






**ಕೊಡುಗೆ:**

**ವಿ. ಶಿವಪ್ರಸಾದ್, ದಯಾನಂದ, ಎಸ್.ಬಿ. ಕುಲಕರ್ಣಿ ಮತ್ತು ಎಂ. ಬಾಲವೆಂಕಟಸುಬ್ಬಯ್ಯ** **ಅನುವಾದ:** **ಬಿ. ನಿರ್ಮಲ**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ನಿರ್ದೇಶಕರು

**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**

ISO 9001: 2015 ಪ್ರಮಾಣೀಕೃತ

ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ

ಭಾರತ ಸರ್ಕಾರ, ಮಾನಂದವಾಡಿ ರಸ್ತೆ

ಶ್ರೀರಾಂಪುರ, ಮೈಸೂರು - 570008

ಫೋನ್: 0821-2362757, 2362406

ಫ್ಯಾಕ್ಸ್ : 0821-2362845 www.csrtimys.res.in

email: cstrimys.csb@nic.in



Copies: 1000 January 2017 Design & Layout: J. Justin Kumar



Technical Bulletin No. 43 [Kannada]


# ಕಾವೇರಿ ಗೋಲ್ಡ್ (MV1 × S8)

## ಅಧಿಕ ಗೂಡಿನ ಇಳುವರಿ ಹಾಗೂ ಗುಣಮಟ್ಟದ ರೇಷ್ಮೆಗೆ ನೂತನ ಸುಧಾರಿತ ಮಿಶ್ರತಳಿ






**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**

ISO 9001: 2015 ಪ್ರಮಾಣೀಕೃತ

ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ

ಭಾರತ ಸರ್ಕಾರ, ಶ್ರೀರಾಂಪುರ

ಮೈಸೂರು – 570008

ಭಾರತೀಯ ರೇಷ್ಮೆ ಉದ್ಯಮದ ಬಹಳಷ್ಟು ಪಾಲು ಮಿಶ್ರತಳಿ ಆಧಾರಿತವಾಗಿದ್ದು, ಹಿಪ್ಪುನೇರಳೆ ಕಚ್ಚಾರೇಷ್ಮೆ ಉತ್ಪಾದನೆಯಲ್ಲಿ ಶೇ. 80 ರಷ್ಟು ಕೊಡುಗೆಯನ್ನು ನೀಡುತ್ತಿದೆ. ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ಜನಪ್ರಿಯ ಮಿಶ್ರತಳಿಯಾದ PM x CSR2 (ಕೋಲಾರ್ ಗೋಲ್ಡ್) ಕಡಿಮೆ ಕಚ್ಚಾರೇಷ್ಮೆಯ ಅಂಶ, ಹೆಚ್ಚಿನ ರೆಂಡಿಟಾ ಹಾಗೂ ಕಡಿಮೆ ಗುಣಮಟ್ಟದ ರೇಷ್ಮೆ ಅಂಶಗಳಂತಹ ಕೆಲವು ಪರಿಮಿತಿಗಳಿಂದ ಕೂಡಿದ್ದು, ಭಾರತದ ವಿದ್ಯುತ್ ಮಗ್ಗವಲಯದ ಉಪಯೋಗಕ್ಕೆ ಸರಿಹೊಂದುವುದಿಲ್ಲ. ಈ ಪರಿಮಿತಿಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅಧಿಕ ಕಚ್ಚಾ ರೇಷ್ಮೆಯ ಅಂಶ ಹಾಗೂ ಸುಧಾರಿತ ಗುಣಮಟ್ಟದ ರೇಷ್ಮೆಯುಳ್ಳ ಕೆಲವು ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸಲಾಗಿತ್ತು. ಆದರೆ ಇವುಗಳು ಕ್ಷೇತ್ರಮಟ್ಟದಲ್ಲಿ ಕಡಿಮೆ ಗೂಡಿನ ಇಳುವರಿಯಿಂದ ಜನಪ್ರಿಯವಾಗಲಿಲ್ಲ. ಈ ದಿಕ್ಕಿನಲ್ಲಿ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು. ಕೆಲವು ಸುಧಾರಿತ ಬಹುಸಂತತಿ ತಳಿಗಳನ್ನು ಉಪಯೋಗಿಸಿ ಅವುಗಳನ್ನು ರೇಷ್ಮೆ ಹುಳುವಿನಲ್ಲಿ ಹಾಲುತೊಂಡೆ ಹಾಗೂ ಸಪ್ಪೆ ರೋಗಗಳನ್ನು ಉಂಟುಮಾಡುವ ವೈರಾಣುಗಳಿಗೆ ಒಡ್ಡಿ MV1 ಎಂಬ ಬಹುಸಂತತಿ ಶುದ್ಧ ತಳಿಯನ್ನು ಅಭಿವೃದ್ಧಿಪಡಿಸಿದೆ. ಈ ಹೊಸ ಬಹುಸಂತತಿ ತಳಿಯ ಗೂಡಿನ ಚಹರೆಗಳು ಹೆಚ್ಚಿನ ಸ್ಥಿರತೆಯನ್ನು ಹೊಂದಿದ್ದು, ಉತ್ತಮ ಕೋಶ ಪರಿವರ್ತನೆ ಪ್ರಮಾಣದ ಲಕ್ಷಣಗಳಿಂದ ಕೂಡಿದೆ. ಈ ಬಹುಸಂತತಿ ತಳಿಯೊಂದಿಗೆ ಎಲ್ಲಾ ಪ್ರಮುಖ ಅಂಡಾಕಾರ ದ್ವಿ ಸಂತತಿ ತಳಿಗಳೊಡನೆ ಸಂಯೋಜಿಸಿ, MV1 x S8 ಎಂಬ ಹೊಸ ಮಿಶ್ರತಳಿಯನ್ನು ಆರಿಸಲಾಗಿದ್ದು, ಇದನ್ನು 'ಕಾವೇರಿ ಗೋಲ್ಡ್' ಎಂದು ಹೆಸರಿಸಿದೆ.

ಪ್ರಚಲಿತವಿರುವ ಮಿಶ್ರತಳಿ PM x CSR2 ಗೆ ಹೋಲಿಸಿದಾಗ ಹೊಸ ಮಿಶ್ರತಳಿಯು ಅಧಿಕಗೂಡಿನ ಉತ್ಪಾದಕತೆ ಮತ್ತು ಗುಣಮಟ್ಟದ ಕಚ್ಚಾ ರೇಷ್ಮೆಯನ್ನು ನೀಡುತ್ತಿದೆ. ಇದಲ್ಲದೆ ಸುಧಾರಿತ ಮಿಶ್ರತಳಿ L14 x CSR2 ಗೂ ಹೋಲಿಸಿದಾಗ ಗೂಡಿನ ಇಳುವರಿಯಲ್ಲಿ ಹೆಚ್ಚಿನ ಸುಧಾರಣೆಯನ್ನು ಹೊಂದಿದೆ. ರೈತರು ಕೈಗೊಂಡ ಸೀಮಿತ ಕ್ಷೇತ್ರ ಪರೀಕ್ಷೆಯಲ್ಲಿ ಈ ಹೊಸ ಮಿಶ್ರತಳಿಯು ಪ್ರತಿ 100 ಮೊಟ್ಟೆಗಳಿಗೆ 73–85 ಕಿ.ಗ್ರಾಂ. ಗೂಡಿನ ಇಳುವರಿ ಹಾಗೂ 5.00 ರಿಂದ 6.32 ರೆಂಡಿಟ್ಟಾವನ್ನು ಹೊಂದಿದ್ದು ಇದರ ಸಾಕಾಣಿಕೆಗೆ ಪ್ರೋತ್ಸಾಹದಾಯಕವಾಗಿದೆ.

### ಹೊಸ ಮಿಶ್ರತಳಿಯ ಪ್ರಮುಖ ಗುಣ–ಲಕ್ಷಣಗಳು:

- ಹೆಚ್ಚಿನ ರೋಗ ನಿರೋಧಕ ಶಕ್ತಿ
- ಅಧಿಕ ಕೋಶಪರಿವರ್ತನೆ ಪ್ರಮಾಣ (>90%)
- ಸುಲಭ ಹುಳುಸಾಕಾಣಿಕೆ
- ಅಧಿಕ ಗೂಡಿನ ಇಳುವರಿ (100 ಮೊಟ್ಟೆಗೆ 70–85 ಕಿ.ಗ್ರಾಂ)
- ಮಚ್ಚೆರಹಿತ, ತಿಳಿನೀಲಿಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಅಂಡಾಕಾರ, ಒತ್ತಾದ ಕವಚ ಮತ್ತು ಉತ್ತಮ ಹೊರಮೈಯುಳ್ಳ, ತಿಳಿಹಸಿರುಮಿಶ್ರಿತ ಹಳದಿ ಗೂಡು

### ಪ್ರಯೋಗಾಲಯದ ಕ್ಷಮತೆ/ಫಲಿತಾಂಶ

| ಮಿಶ್ರತಳಿ | ಮೊಟ್ಟೆಗಳ ಸಂಖ್ಯೆ | ಕೋಶಾವಸ್ಥೆ (ಶೇ) | ಗೂಡಿನ ತೂಕ (ಗ್ರಾಂ) | ಕವಚದ ತೂಕ (ಗ್ರಾಂ) | ಶೇಕಡಾ ವಾರು ಕವಚ | ನೂಲು ಬಿಚ್ಚಾಣಿಕಾ ಪ್ರಮಾಣ (ಶೇ) | ಎಳೆಯ ಸರಾಸರಿ ಉದ್ದ (ಮೀ) | ಕಚ್ಚಾ ರೇಷ್ಮೆ (ಶೇ) | ಶುಚಿತ್ವ (ಪಾಯಿಂಟ್) |
|---|---|---|---|---|---|---|---|---|---|
| ಕಾವೇರಿಗೋಲ್ಡ್ | 506 | 98.40 | 1.792 | 0.389 | 21.7 | 86 | 860 | 14.80 | 90 |
| L14 × CSR2* | 490 | 84.53 | 1.654 | 0.329 | 19.9 | 88 | 811 | 14.04 | 90 |
| PM × CSR2** | 475 | 93.22 | 1.534 | 0.298 | 19.4 | 84 | 663 | 13.40 | 86 |
| ಹೊಸ ಮಿಶ್ರತಳಿಯಲ್ಲಿ ಸುಧಾರಣೆ* | 3.27 | 16.41 | 8.34 | 18.24 | 9.05 | 2.33 | 6.04 | 5.41 | |
| ಹೊಸ ಮಿಶ್ರತಳಿಯಲ್ಲಿ ಸುಧಾರಣೆ** | 6.53 | 5.56 | 16.82 | 30.54 | 11.86 | 4.76 | 29.71 | 10.45 | 4.65 |

### ಆಂತರಿಕಾ ಪರೀಕ್ಷಾ ಕ್ಷಮತೆ/ಫಲಿತಾಂಶ

| ಮೊಟ್ಟೆಗಳ ಸಂಖ್ಯೆ | ಹುಳುವಿನ ಅವಧಿ (ದಿನಗಳು) | ಕೋಶಾವಸ್ಥೆ (ಶೇ) | 100 ಮೊಟ್ಟೆಗಳಿಗೆ ಗೂಡಿನ ಇಳುವರಿ (ಕಿ.ಗ್ರಾಂ.) | ಗೂಡಿನ ತೂಕ (ಗ್ರಾಂ) | ಕವಚದ ತೂಕ (ಗ್ರಾಂ) | ಶೇಕಡಾ ವಾರು ಕವಚ | ನೂಲು ಬಿಚ್ಚಾಣಿಕಾ ಪ್ರಮಾಣ (ಶೇ) | ಎಳೆಯ ಸರಾಸರಿ ಉದ್ದ (ಮೀ) | ರೆಂಡಿಟ್ಟಾ | ಕಚ್ಚಾ ರೇಷ್ಮೆ (ಶೇ) | ಶುಚಿತ್ವ (ಪಾಯಿಂಟ್) |
|---|---|---|---|---|---|---|---|---|---|---|---|
| 520 | 23 | 90.47 | 78.00 | 2.114 | 0.456 | 21.60 | 80.85 | 903 | 6.49 | 15.40 | 90 |

### ಕ್ಷೇತ್ರಮಟ್ಟದ ಫಲಿತಾಂಶ (41350 ಮೊಟ್ಟೆ ಹಾಗೂ 211 ರೈತರು)

| ಮೊಟ್ಟೆಗಳ ಸಂಖ್ಯೆ | ಹುಳುವಿನ ಅವಧಿ (ದಿನಗಳು) | ಕೋಶಾವಸ್ಥೆ (ಶೇ) | 100 ಮೊಟ್ಟೆಗಳಿಗೆ ಗೂಡಿನ ಇಳುವರಿ (ಕಿ.ಗ್ರಾಂ.) | ಗೂಡಿನ ತೂಕ (ಗ್ರಾಂ) | ಕವಚದ ತೂಕ (ಗ್ರಾಂ) | ಶೇಕಡಾ ವಾರು ಕವಚ | ನೂಲು ಬಿಚ್ಚಾಣಿಕಾ ಪ್ರಮಾಣ (ಶೇ) | ಎಳೆಯ ಸರಾಸರಿ ಉದ್ದ (ಮೀ) | ರೆಂಡಿಟ್ಟಾ | ಕಚ್ಚಾ ರೇಷ್ಮೆ (ಶೇ) | ಶುಚಿತ್ವ (ಪಾಯಿಂಟ್) |
|---|---|---|---|---|---|---|---|---|---|---|---|
| 550 | 23 | 88-92 | 73.00-85.00 | 1.90-2.00 | 0.350-0.432 | 18.42-21.31 | 89-90 | 911-962 | 75-79 | 5.96-6.32 | 88-90 |